ದಿನಾಂಕ 23 ನೇ ಸೆಪ್ಟೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ

ನನ್ನ ಗಂಡ ಹಾಗೂ ಮಾವ ಮೃತರಾದ ನಂತರ ನನ್ನ ಅತ್ತೆ ನನಗೆ ಹಾಗೂ ನನ್ನ ಇಬ್ಬರು ಮಕ್ಕಳಿಗೆ ವಿಮೆ ಮಾಡಿಸಿದ್ದರು ಎಂದರೆ ಸರಿ. ಕೆ ಡಿ ಸಿ ಸಿ ಬ್ಯಾಂಕ್ ನಲ್ಲಿ ನನ್ನ ಹಾಗೂ ನನ್ನ ಇಬ್ಬರು ಮಕ್ಕಳ ಹೆಸರಿನಲ್ಲಿ ತಲಾ 2 ಲಕ್ಷದಂತೆ ಒಟ್ಟು 6 ಲಕ್ಷವನ್ನು **fixed deposit** ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಇಬ್ಬರು ಮಕ್ಕಳನ್ನು ನನ್ನ ಅತ್ತೆ ಕಾಪ್ಸ್ ಹಾಗೂ ಕಾರ್ಲ್ಸ್ ಶಾಲೆಗೆ ಸೇರಿಸಿದ್ದರು ಎಂದರೆ ಸರಿ. ನನ್ನ ಮಗ 5 ನೇ ತರಗತಿ ವ್ಯಾಸಾಂಗ ಮಾಡುವತನಕ ಕಾರ್ಲ್ಸ್ ಶಾಲೆಯಲ್ಲಿ ನನ್ನ ಶಾಲಾ ಶುಲ್ಕ ಪಾವತಿಸಿದ್ದಾರೆ. ನನ್ನ ಮಗಳಿಗೆ 2 ವರ್ಷ ಶಾಲಾ ಶುಲ್ಕ ಪಾವತಿಸಿದ್ದಾರೆ ಎನ್ನುತ್ತಾರೆ. ನನ್ನ ಅತ್ತೆ ನಮ್ಮ ತಾಯಿ ಮನೆಗೆ ಬಂದು ಒಂದುವರೆ ಲಕ್ಷ ಹಣವನ್ನು ನಗದಾಗಿ ನೀಡಿದ್ದರು ಎಂದರೆ ನಾನು ಅತ್ತೆ ಮನೆಯಲ್ಲಿ ಇಟ್ಟಿದ್ದ ಚೆಕ್ ಮೂಲಕ ಇಟ್ಟಿದ್ದ ಹಣವನ್ನು ನನ್ನ ಖಾತೆಯ ಮೂಲಕ ತೆಗೆದುಕೊಟ್ಟಿದ್ದಾರೆ ಎನ್ನುತ್ತಾರೆ. ನನ್ನ ಅತ್ತೆಯೇ ಆಸ್ತಿಪಾಸ್ತಿ ಹಾಗೂ ಮನೆಯ ಜವಾಬ್ದಾರಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

ಮನೆಯಲ್ಲಿ ಕೆಲಸ ಮಾಡಲು ಯಾರೂ ಇರಲಿಲ್ಲ ನಾನೇ ಮಾಡುತ್ತಿದ್ದೆ. ತೋಟಕ್ಕೆ ಕೆಲಸ ಮಾಡಲು ಕೆಲಸಗಾರರು ಬರುತ್ತಿದ್ದರು ಎನ್ನುತ್ತಾರೆ. ನನ್ನ ಅತ್ತೆಯ ಮನೆ ಸುಸಜ್ಜಿತವಾಗಿ ಹಾಗೂ ಒಳ್ಳೆಯ ವಾತಾವರಣದಲ್ಲಿ ನಿರ್ಮಿಸಲಾಗಿತ್ತು ಎಂದರೆ ಸರಿ. ನನ್ನ ಮಾವ ಇದ್ದಾಗ ಮನೆ ಚೆನ್ನಾಗಿತ್ತು ಎನ್ನುತ್ತಾರೆ. ಎಲ್ಲಾ ಆಸ್ತಿಗಳು ನನ್ನ ಮಾವನದ್ದೇ ಎನ್ನುತ್ತಾರೆ. ನನ್ನ ಮಾವ ನನ್ನ ಅತ್ತೆಯನ್ನು 2 ನೇ ಮದುವೆ ಆಗಿದ್ದ ಕಾರಣ ಅವರ ಮೊದಲ ಹೆಂಡತಿ ತಕರಾರು ಮಾಡಬಹುದು ಎಂದು ಎಲ್ಲಾ ಆಸ್ತಿಗಳನ್ನು ನನ್ನ ಅತ್ತೆ ಹೆಸರಿನಲ್ಲಿ ಖರೀದಿಸಿದ್ದರು ಎನ್ನುತ್ತಾರೆ. 2014 ರಿಂದ 2018 ರವರೆಗೆ ಮನೆಯಲ್ಲಿ ಗಲಾಟೆ ಇತ್ತು ಎನ್ನುತ್ತಾರೆ. 2014 ರಿಂದ 2018 ರತನಕ ನಾನು ನಮ್ಮ ಅತ್ತೆ ಮನೆಯಲ್ಲೆ ಇದ್ದೆ ಎನ್ನುತ್ತಾರೆ. ನಾನು ಆ ಸಮಯದಲ್ಲಿ ನನ್ನ ಮಕ್ಕಳನ್ನು ನೋಡಿಕೊಳ್ಳುವುದು ಹಾಗೂ ನನ್ನ ಅತ್ತೆಗೆ ಮನೆ ಕೆಲಸದಲ್ಲಿ ಸಹಕರಿಸುವುದು ಮಾಡುತ್ತಿದ್ದೆ ಎನ್ನುತ್ತಾರೆ. ನಮ್ಮ ಅತ್ತೆ ಮನೆ ಬಳಿ ಲೈನ್ ಹೌಸ್ ನಲ್ಲಿ ಕೆಲವು ಕೆಲಸಗಾರರು ಇದ್ದರು ಹಾಗೂ ಆಲೆಮನೆ ಸರಸ್ವತಿ ಎನ್ನುವವರು ಹತ್ತಿರದಲ್ಲಿ ಇದ್ದರು, ಅವರು ನಮ್ಮ ಮನೆಗೆ ಬರುತ್ತಿದ್ದರು ಎನ್ನುತ್ತಾರೆ. ನನ್ನ ಗಂಡ ಮೃತರಾದ ನಂತರ ಯಾರೂ ನಮ್ಮ ಮನೆಗೆ ಬರುತ್ತಿರಲಿಲ್ಲ, ನಾನು ಯಾರ ಮನೆಗೂ ಹೋಗುತ್ತಿರಲಿಲ್ಲ ಎನ್ನುತ್ತಾರೆ.

ನನ್ನ ಅಪ್ಪ, ಅಮ್ಮ ಹಾಗೂ ತಮ್ಮ ನಮ್ಮ ಅತ್ತೆ ಮನೆಗೆ ಬರುತ್ತಿದ್ದರು. ನಮ್ಮ ನನ್ನನ್ನು ನೋಡಿ ಅಳುತ್ತಿದ್ದರೆ ಆಗ ನಮ್ಮ ಅತ್ತೆ, ನೀವು ಏಕೆ ಅಳುವುದು ಎಂದು ಮಾತನಾಡುತ್ತಿದ್ದರು. ನನ್ನ ಅತ್ತೆ ಗಂಡ ಹಾಗೂ ಮಗನನ್ನು ಕಳೆದುಕೊಂಡು ದುಃಖದಲ್ಲಿ ಇದ್ದರು ಎಂದರೆ ಅವರು ನನ್ನ ಮುಂದೆ ತೋರಿಸಿಕೊಳ್ಳುತ್ತಿರಲಿಲ್ಲ ಎನ್ನುತ್ತಾರೆ. ನನ್ನ ಅತ್ತೆಗೆ ಸುಮಾರು 60 ವರ್ಷ ವಯಸ್ಸು ಎಂದರೆ ಅಷ್ಟು ವಯಸ್ಸು ಆಗಿರುವುದಿಲ್ಲ ಎನ್ನುತ್ತಾರೆ. ನನ್ನ ಅತ್ತೆ ಮನೆ ಹಾಗೂ ತೋಟದ ಜವಾಬ್ದಾರಿ ನೋಡಿಕೊಳ್ಳುತ್ತಿದ್ದರು ಎಂದರೆ ನಾನು ಮನೆ ನೋಡಿಕೊಳ್ಳುತ್ತಿದ್ದೆ, ಅವರು ತೋಟ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ನನ್ನ ಅತ್ತೆ ನನ್ನನ್ನು ಸಹ ತೋಟಕ್ಕೆ ಕರೆದುಕೊಂಡು ಹೋಗುತ್ತಿದ್ದರು ಎನ್ನುತ್ತಾರೆ. ನನಗೂ ಸಹ ತೋಟದ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ಇದೆ ಎನ್ನುತ್ತಾರೆ. ಕಾಫಿ ಹಾಗೂ ಒಳ್ಳೆ ಮೆಣಸು ಬೆಳೆಯುತ್ತಿದ್ದರು, ವರ್ಷಕ್ಕೆ ಎಷ್ಟು ಆದಾಯ ಹಾಗೂ ಖರ್ಚು ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಅತ್ತೆ ನನಗೆ ಹೇಳುತ್ತಿರಲಿಲ್ಲ ಎನ್ನುತ್ತಾರೆ.

ನನ್ನ ಅತ್ತೆ ನನಗೆ ಚಿನ್ನದ ಆಭರಣಗಳನ್ನು ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ನೀಡಿದ್ದ ಒಡವೆಗಳನ್ನು ನನ್ನ ಗಂಡ ಇದ್ದಾಗ ನನ್ನ ಒಡವೆಗಳನ್ನು ನನ್ನ ಗಂಡ ಹಾಗೂ ಅತ್ತೆ ತೆಗೆದುಕೊಂಡು ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಸದರಿ ವಿಚಾರವನ್ನು ನನ್ನ ತಂದೆ ತಾಯಿಗೆ ತಿಳಿಸಿದ್ದೇನೆ. ಚಿನ್ನದ ಸವರಿನ್, ನೆಕ್ಲೆಸ್ ಹಾಗೂ ಇತರೆ ಒಡವೆಗಳನ್ನು ನನ್ನ ಗಂಡ ಹಾಗೂ ಅತ್ತೆ ತೆಗೆದುಕೊಂಡು ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ನನ್ನ ಅತ್ತೆಯೇ ಮನೆ, ವಾಹನಗಳು ಹಾಗೂ ತೋಟವನ್ನು ನಿರ್ವಹಿಸುತ್ತಿದ್ದರು ಎನ್ನುತ್ತಾರೆ. ನನ್ನ ಅತ್ತೆ 24 ಗ್ರಾಂ ನ ಚಿನ್ನದ ಹಾರ, 20 ಗ್ರಾಂ ನ ಚಿನ್ನದ ಓಲೆ, ಒಂದುವರೆ ಲಕ್ಷ ಬೆಲೆಯ ರೂಬಿ ಸೆಟ್, 48 ಗ್ರಾಂನ ಚಿನ್ನದ ಬಳೆ, 16 ಗ್ರಾಂ ನ ಚಿನ್ನದ ಚೈನ್ ಪೆಂಡೆಂಟ್, 35 ಗ್ರಾಂನ ಚಿನ್ನದ ಓಲೆ, 12 ಗ್ರಾಂ ನ 2 ಚಿನ್ನದ ಉಂಗುರ ನೀಡಿದ್ದರು ಎಂದರೆ ಸರಿಯಲ್ಲ, ಮದುವೆ ಸಮಯದಲ್ಲಿ ಒಂದು ಉಂಗುರ ಕೊಟ್ಟಿದ್ದರು ಎನ್ನುತ್ತಾರೆ. ನನ್ನ ಅತ್ತೆಗೆ ನನ್ನ ಮೇಲೆ ಪ್ರೀತಿ ಇದ್ದ ಕಾರಣ ಮೇಲೆ ಹೇಳಿದ ಒಡವೆಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಹಾಗೂ ಮಾವ ಮೃತರಾದ ನಂತರ ನನ್ನ ಅತ್ತೆ ತುಂಬಾ ಕಷ್ಟದಿಂದ ನನ್ನನ್ನು ಹಾಗೂ ನನ್ನ ಮಕ್ಕಳನ್ನು ನೋಡಿಕೊಂಡಿದ್ದರು ಎಂದರೆ ಯಾವುದೇ ಕಷ್ಟ ಇರಲಿಲ್ಲ ಎನ್ನುತ್ತಾರೆ. ನನ್ನ ಅತ್ತೆಗೆ ಅವರ ಸಹೋದರ ಸಹಾಯ ಮಾಡುತ್ತಿದ್ದರು ಎನ್ನುತ್ತಾರೆ. ನನಗೆ ನ್ಯಾಯ ಕೊಡಿಸಿ ಎಂದು ಅರ್ಜಿ ಸಲ್ಲಿಸಿದ್ದೇನೆ ಎನ್ನುತ್ತಾರೆ.

ಈ ಪ್ರಕರಣದಲ್ಲಿ ಈ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದ ಕಾರಣ ನನ್ನ ಅತ್ತೆಗೆ ತುಂಬಾ ನೋವು ಆಗಿದೆ ಎಂದರೆ ನನಗೂ ನೋವಾಗಿದೆ ಎನ್ನುತ್ತಾರೆ. ನನ್ನ ಅತ್ತೆ ನನ್ನ ಗಂಡು ಮಗು ಹಾಗೂ ಹೆಣ್ಣು ಮಗುವಿನ ನುಡುವೆ ತಾರತಮ್ಯ ಮಾಡುತ್ತಿದ್ದರು ಎನ್ನುತ್ತಾರೆ. ನನ್ನ ಅತ್ತೆ, ನಾದಿನಿ

ಹಾಗೂ ನನ್ನ ಅತ್ತೆಯ ಸಹೋದರ ನನಗೆ ಯಾವುದೇ ದೌರ್ಜನ್ಯ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಮಕ್ಕಳ ಎಲ್ಲಾ ಖರ್ಚುಗಳನ್ನು ನನ್ನ ಅತ್ತೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತೆ ಯಾವುದೆ ಜೀವನಾಂಶ ಹಾಗೂ ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆಯ ಸ್ವಯಾರ್ಜಿತ ಆಸ್ತಿಯಲ್ಲಿ ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.